ಶ್ರೀ ಬಿ.ಆರ್. ಗುರುದೇವ್ : ಮಾನ್ಯ ಉಪಾಧ್ಯಕ್ಷಿಣಿಯವರೆ ನನಗೆ ಉತ್ತರ ಬಂದಿಲ್ಲ. ಇದು ಸರ್ವೇಸಾಮಾನ್ಯ ಎನಿಸುತ್ತದೆ. ನಮಗೆ ಉತ್ತರಗಳು ತಲುಪುತ್ತಿಲ್ಲ ಎಂದು ಸುಮಾರು ಜನ ಸದಸ್ಯರು ದೂರುಗಳನ್ನು ಹೇಳುತ್ತಿದ್ದಾರೆ. ತಮ್ಮಿಂದಲೂ ಕೂಡ ನನಗೆ ಉತ್ತರ ಬಂದಿಲ್ಲ. ದಯವಿಟ್ಟು ನನಗೆ ಉತ್ತರವನ್ನು ಒದಗಿಸಿಕೊಟ್ಟರೆ ನಂತರ ನಾನು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಇಲಾಖೆಯ ಅಧಿಕಾರಿಗಳಿಂದ ಯಾವಾಗಲೂ ಉತ್ತರಗಳೇ ಬರುವುದಿಲ್ಲ. ಬಂದರೂ ಸದನ ಪ್ರಾರಂಭವಾಗುವುದಕ್ಕೆ ಅರ್ಧ ಗಂಟೆ ಮುಂಚಿತವಾಗಿ ಕೊಡುತ್ತಾರೆ. ಇದಿರಿಂದ ನಮಗೆ ಬಹಳ ತೊಂದರೆಯಾಗುತ್ತಿದೆ. ಪ್ರತಿಯೊಂದು ಸಾರಿಯೂ ಇದೇರೀತಿ ನಮಗೆ ತೊಂದರೆಯಾಗುತ್ತಿದೆ. ಜವಾಬ್ದಾರಿಯಿಂದ ಇಲಾಖೆಯ ಅಧಿಕಾರಿಗಳು ಕೆಲಸಮಾಡುತ್ತಿಲ್ಲ.

ಉಪಾಧ್ಯಕ್ಷಿಣಿಯವರು : ಈ ಪ್ರಶ್ನೆಗೆ ಉತ್ತರ ಬಂದಿಲ್ಲ. ಆದ್ದರಿಂದ ಇದನ್ನು ತಡೆಹಿಡಿದು ಮುಂದೆ ತೆಗೆದುಕೊಳ್ಳೋಣ.

ಶ್ರೀ ಪೆಂಕಾಲ್ ಎಂ. ಮಲ್ಲಪ್ಪ : ನಮಗೆ ಯಾರಿಗೂ ಕೂಡ ಉತ್ತರವೇ ಬಂದಿಲ್ಲ. ಯಾರು ಪ್ರಶ್ನೆಯನ್ನು ಕೇಳುತ್ತಾರೆ ಅವರಿಗೆ ಮಾತ್ರ ಉತ್ತರವನ್ನು ಒದಗಿಸುತ್ತಾರೆ.

ಶ್ರೀ ಬಿ.ಆರ್. ಗುರುದೇವ್ : ನನ್ನ ಹತ್ತಿರ ಉತ್ತರ ರೆಡಿ ಇದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಅವರ ಹತ್ತಿರ ಉತ್ತರ ಇದೆಯಂತೆ. ಆದರೆ ನಮಗೆ ಬಂದಿಲ್ಲ.

ಉಪಾಧ್ಯಕ್ಷಿಣಿಯವರು : ಇಲ್ಲ ನನಗೂ ಕೂಡ ಉತ್ತರ ಬಂದಿಲ್ಲ.

ಶ್ರೀ ಬಿ.ಆರ್. ಗುರುದೇವ್ : ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಅಲ್ಲದೇ ತಮ್ಮಿಂದಲೂ ಕೂಡ ನನಗೆ ಉತ್ತರ ಬಂದಿಲ್ಲ. ತಮ್ಮ ಹತ್ತಿರ ಅಥವಾ ಅಧಿಕಾರಿಗಳ ಹತ್ತಿರ ಉತ್ತರ ಇದ್ದರೆ ನನಗೆ ಕಳುಹಿಸಿಕೊಟ್ಟರೆ ಅದರ ಮೇಲೆ ಉಪಪ್ರಶ್ನೆಯನ್ನು ಕೇಳಬಹುದು. ಇಲ್ಲದಿದ್ದರೆ ಈ ಪ್ರಶ್ನೆ ಮುಂದಕ್ಕೆ ಹೋಗುತ್ತದೆ. ಆ ದೃಷ್ಟಿಯಿಂದ ನಾನು ತಮ್ಮನ್ನು ಕೇಳುತ್ತಿದ್ದೇನೆ.

ಉಪಾಧ್ಯಕ್ಷಿಣಿಯವರು : ಇದನ್ನು ವಿಥ್‌ಹೋಲ್ಡ್ ಮಾಡಿ ಮುಂದಕ್ಕೆ ಹೋಗೋಣ.

(ಪ್ರ.ಪ್ರ. 3096ನ್ನು ತಡೆ ಹಿಡಿಯಲಾಯಿತು)

**ಸಿದ್ದಾಪುರ ಮಂಡಲ ಪಂಚಾಯತ್‌ನಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ.**

3187. ಶ್ರೀ ಗೋಪಾಲ ಮುಕಂದ ಕಾನಡೆ (ಸಿರಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿದ್ದಾಪುರ ಮಂಡಲ ಪಂಚಾಯತ್‌ನಲ್ಲಿ 1990-91ನೇ ಸಾಲಿಗೆ ಜವಾಹರ್ ರೋಜ್‌ಗಾರ್ ಯೋಜನೆಗಾಗಿ ಎಷ್ಟು ಹಣ ಹಾಗೂ ಧಾನ್ಯ ಒದಗಿಸಲಾಗಿದೆ.

ಆ) ಆ ರೋಜ್‌ಗಾರ್ ಯೋಜನೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ರೋಜ್‌ಗಾರ್ ಯೋಜನೆಗೆ ಒದಗಿಸಿದ 55 ಕ್ವಿಂಟಾಲ್ ಅಕ್ಕಿ ವಿಚಾರಣೆಯೇ ಹಾಗಾದುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ ಸಚಿವರು) :

ಅ) 1990-91ನೇ ಸಾಲಿನಲ್ಲಿ ಸಿದ್ದಾಪುರ ಮಂಡಲ ಪಂಚಾಯತಿಗೆ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ರೂ. 1,38,623.72 ನಗದಿ ಅನುದಾನ ಮತ್ತು ರೂ. 23034 ಮೌಲ್ಯದ 76 ಕ್ವಿಂಟಾಲ್ 78 ಕೆ.ಜಿ. ಆಹಾರ ಧಾನ್ಯ ಒದಗಿಸಲಾಗಿದೆ.

ಆ) ರೋಜ್‌ಗಾರ್ ಯೋಜನೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. 1990-91 ಸಾಲಿನಲ್ಲಿ ರೂ. 6987.50 ಮೌಲ್ಯದ 21 ಕ್ವಿಂಟಾಲ್50 ಕೆಜಿ ಆಹಾರ ಧಾನ್ಯ ಸೇರಿ ರೂ. 33968 ನ್ನು ವಿನಿಯೋಗಿಸಲಾಗಿದೆ. 1990-91 ಮತ್ತು 1991-92ರ ಪೂರ್ತಿ ಹಣವನ್ನು 31-8-91ರ ತನಕ ವಿನಿಯೋಗಿಸಿರುವುದಿಲ್ಲ. ರೂ. 59,000ನ್ನು ಮಂಡಲ ಪಂಚಾಯತ್ ಡಿಪಾಸಿಟ್ ಮಾಡಿದೆ.

ಇ) ಹೌದು. 55 ಕ್ವಿಂಟಾಲ್ 28 ಕೆಜಿ ಆಹಾರ ಧಾನ್ಯಗಳು ಈಗಲೂ ಸಿದ್ದಾಪುರ ಮಂಡಲ ಪಂಚಾಯತ್‌ದಲ್ಲಿದೆ.

ಈ) ಸಿದ್ಧಾಪುರ ಮಂಡಲ ಪಂಚಾಯಿತಿಯಲ್ಲಿ ಶಿಲ್ಕು ಇರುವ ಆಹಾರ ಧಾನ್ಯ ಮತ್ತು ಅನುದಾನವನ್ನು ಪೂರ್ತಿಯಾಗಿ ವಿನಿಯೋಗಿಸಲು ನಿರ್ದೇಶನ ನೀಡಲಾಗಿದೆ. ಆಹಾರ ಧಾನ್ಯದ ಯಾವುದೇ ನಷ್ಟವನ್ನು ಸಿದ್ದಾಪುರ ಮಂಡಲ ಪಂಚಾಯಿತಿ ಪ್ರಧಾನರು ಮತ್ತು ಕಾರ್ಯದರ್ಶಿಯವರಿಂದ ವಸೂಲಿ ಮಾಡಲಾಗುವುದು.

ಶ್ರೀ ಗೋಪಾಲ ಮುಕುಂದ ಕಾನಡೆ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸಚಿವರಲ್ಲಿ ನನ್ನ ಒಂದೇ ಒಂದು ಸಣ್ಣ ವಿನಂತಿ ಏನೆಂದರೆ,ಸಿದ್ದಾಪುರ ಪರಿವರ್ತನ ಮಂಡಲ ಪಂಚಾಯಿತಿಯಲ್ಲಿ 1989ರಿಂದ ಇವತ್ತಿನವರೆಗೂ ಹರಿಜನರಿಗೋಸ್ಕರ ಏನು 18 ಪರ್ಸೆಂಟ್ ಹಣವನ್ನು ಖರ್ಚುಮಾಡಬೇಕೋ ಅದನ್ನು ಖರ್ಚು ಮಾಡಿಲ್ಲ. ಅವರಿಗೆ ಯಾವ ಸೌಲಭ್ಯವನ್ನು ಸಹ ಒದಗಿಸಿಕೊಡುವುದಕ್ಕೆ ಖರ್ಚು ಮಾಡಿಲ್ಲ.

ಇನ್ನು ಎರಡನೆಯದಾಗಿ, ರೋಜ್‌ಗಾರ್ ಯೋಜನೆಯಲ್ಲಿ ಬಿಡುಗಡೆ ಮಾಡಿದಂಥ ಅಕ್ಕಿಯು ಹಾಳಾಗುತ್ತಿದೆ. ಇದರ ಬಗ್ಗೆ ತನಿಖೆ ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡುತ್ತೀರಾ ?

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಣಿಯವರೆ, ರೋಜ್‌ಗಾರ್ ಯೋಜನೆಯನ್ವಯ ಕಾಳು ಕಡ್ಡಿಗಳು ನಷ್ಟವಾಗುತ್ತಿವೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ವಿತಕ್ಕೆ ನಷ್ಟವಾಗಿದೆ ಎಂಬುದನ್ನು ಕೂಡಲೇ ಎನ್‌ಕ್ವೈರಿ ಮಾಡಿಸಿ ತಪ್ಪಿತಸ್ಥರ ವಿರುದ್ಧ ಕೂಡಲೇ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ : 18 ಪರ್ಸೆಂಟ್ ಖರ್ಚು ಮಾಡಿಲ್ಲ. 1989ರಿಂದ ಇವತ್ತಿನವರೆಗೆ 18 ಪರ್ಸೆಂಟ್ ಪ್ರಕಾರ ಲಕ್ಷಗಟ್ಟಲೆ ಹಣ ಇದೆ. ಒಂದು ಪೈಸೆ ಕೂಡ ಖರ್ಚುಮಾಡಿಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ.ಹೆಚ್. ಪಾಟೀಲ್ : ನಾನು ಅದನ್ನು ಒಪ್ಪಿದೆ. ಅದನ್ನು ವಿತಕ್ಕೋಸ್ಕರ ಖರ್ಚು ಮಾಡಲಿಲ್ಲ? ಅವರೇ ಕೊಟ್ಟಿಲ್ಲವೋ ಅಥವಾ ಯಾರು ಕೇಳಲಿಲ್ಲವೋ ಎನ್ನುವುದನ್ನು ಕೇಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ : ಖಚಿತ ಮಾಡಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್ : ಇವತ್ತೇ ಅದರ ಬಗ್ಗೆ ಏನ್‌ಕ್ವಯರಿ ಮಾಡಲಿಕ್ಕೆ ಕಳುಹಿಸುತ್ತೇನೆ. ವರದಿ ಬಂದನಂತರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

**ಕಬಿನಿ ಜಲಾಶಯದಲ್ಲಿ ಏತನೀರಾವರಿ ಮಾಡುವ ಬಗ್ಗೆ**

3100-ಶ್ರೀ ಎಂ.ಪಿ. ವೆಂಕಟೇಶ್ (ಪೆಗ್ಗಡದೇವನಕೋಟೆ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ಏತ ನೀರಾವರಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?*

ಆ) *ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ಏತ ನೀರಾವರಿ ಮಾಡಲು ಇರುವ ತೊಂದರೆಯೇನು?*

ಇ) *ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ಏತ ನೀರಾವರಿ ಮಾಡಿದರೆ ನೀರಾವರಿಯಾಗುವ ಜಮೀನಿನ ವಿಸ್ತೀರ್ಣವೆಷ್ಟು?*

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಈ ಪ್ರಸ್ತಾವೆಯು ಇನ್ನೂ ಪರಿಶೀಲನೆಯಲ್ಲಿದೆ.

ಆ) ಕಬಿನಿ ಜಲಾಶಯದಲ್ಲಿ ಹೆಚ್ಚುವರಿ ನೀರಿನ ಲಭ್ಯತೆ ಮತ್ತು ನೀರನ್ನು ಸುಮಾರು 185 ಅಡಿ ಎತ್ತರಕ್ಕೆ ಎತ್ತುವ ವಿಚಾರ.

ಇ) ಸುಮಾರು 2000 ಹೆಕ್ಟೇರುಗಳು.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಸಭಾಧ್ಯಕ್ಷಣೆಯವರೇ, ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ಏತ ನೀರಾವರಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು, ಎನ್ನುವುದಕ್ಕೆ ಈ ಪ್ರಸ್ತಾವನೆ ಇನ್ನೂ ಪರಿಶೀಲನೆಯಲ್ಲಿದೆ. ಎಂದು ಉತ್ತರದಲ್ಲಿ ಹೇಳಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಇದು ಪರಿಶೀಲನೆಯಲ್ಲಿಯೇ ಇದೆ. ಎರಡನೆಯ ಪ್ರಶ್ನೆಗೆ ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ಏತ ನೀರಾವರಿ ಮಾಡಲು ಇರುವ ತೊಂದರೆ ಏನು ಎಂದು ಕೇಳಿರುವುದಕ್ಕೆ ಕಬಿನಿ ಜಲಾಶಯದಲ್ಲಿ ಹೆಚ್ಚುವರಿ ನೀರಿನ ಲಭ್ಯತೆ ಮತ್ತು ನೀರನ್ನು ಸುಮಾರು 185 ಅಡಿ ಎತ್ತರಕ್ಕೆ ಎತ್ತುವ ವಿಚಾರ ಎಂದು ಹೇಳುತ್ತಿದ್ದಾರೆ. ನನ್ನ ಮೂರನೆಯ ಪ್ರಶ್ನೆ. "ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ಏತ ನೀರಾವರಿ ಮಾಡಿದರೆ ನೀರಾವರಿಯಾಗುವ ಜಮೀನಿನ ವಿಸ್ತೀರ್ಣವೆಷ್ಟು", ಎಂದರೆ "ಸುಮಾರು ಎರಡು ಸಾವಿರ ಹೆಕ್ಟೇರುಗಳು" ಎಂದು ಹೇಳುತ್ತಾರೆ. ಈ ಮಾಹಿತಿಯಲ್ಲಿ ಸುಮಾರು ನಾಲ್ಕುಸಾವಿರ ಎಕರೆ ನೀರಾವರಿಯಾಗುವಂಥ ಮಾತನ್ನು ಹೇಳುತ್ತಿದ್ದಾರೆ. ಆದರೆ ವಾಸ್ತವವಾಗಿ 28 ಸಾವಿರ ಎಕರೆ ನೀರಾವರಿಯಾಗುವಂಥ ಮಾತನ್ನು ಹೇಳುತ್ತಿದ್ದಾರೆ. ಆದರೆ ವಾಸ್ತವಿಕವಾಗಿ 28 ಸಾವಿರ ಎಕರೆ ನೀರಾವರಿ ಈ ತಾಲ್ಲೂಕಿನಲ್ಲಿ ಏತ ನೀರಾವರಿ ಮೂಲಕ ಆಗುತ್ತದೆ. ಸುಮಾರು ಸಾವಿರಾರು ಎಕರೆಗಳಿಗೆ ಕಬಿನಿ ಜಲಾಶಯದಿಂದ ನೀರು ಬಿಡುಗಡೆಯಾಗಿದೆ. ನುಗು ಜಲಾಶಯದಿಂದ, ಅದೇ ರೀತಿಯಲ್ಲಿ ಈ ತಾರಕ ಜಲಾಶಯದಿಂದಲೂ ಸಾವಿರಾರು ಎಕರೆ ಮುಳುಗಡೆಯಾಗಿದೆ. ಪೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಸುಮಾರು ಸಾವಿರಾರು ಎಕರೆ ಮುಳುಗಡೆಯಾಗಿದೆ. ಇದರಿಂದಾಗಿ ರೈತರಿಗೆ ಯಾವುದೇ